# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ತಾಂತ್ರಿಕ ವಿಭಾಗ/ಟಿ.ಎನ್.08/2009-10 ದಿನಾಂಕ: 20-01-2010

## -::ಅಲ್ಪಾವಧಿ ಟೆಂಡರ್ ಪ್ರಕಟಣೆ ::-

ದೊಡ್ಡಬಳ್ಳಾಪುರ ನಗರಸಭಾ ವ್ಯಾಪ್ತಿಯಲ್ಲಿ 2008-09ನೇ ಸಾಲಿನ 12ನೇ ಹಣಕಾಸು ಯೋಜನೆಯ ಮುಕ್ತನಿಧಿ ಹಾಗೂ 2009-10ನೇ ಸಾಲಿನ ಸಾರ್ವಜನಿಕ ಕಟ್ಟಡ ನಿರ್ವಹಣೆ ನಿಧಿಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದು, ಇವುಗಳನ್ನು ನಿರ್ವಹಿಸುವಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ನಗರಸಭೆ ದೊಡ್ಡಬಳ್ಳಾಪುರ ಕಛೇರಿಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು ದ್ವಿಪ್ರತಿಯಲ್ಲಿ ಕರೆಯಲಾಗಿದೆ. ಟೆಂಡರ್‌ದಾರರು ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ಇವರ ಕಛೇರಿಯಲ್ಲಿ ದಿನಾಂಕ: 08-02-2010 ಸಾಯಂಕಾಲ 4.00ಗಂಟೆಯೊಳಗೆ ಸ್ವೀಕರಿಸಲಾಗುವುದು. ಹಾಗೂ ಸಾಧ್ಯವಾದಲ್ಲಿ ಇದೇ ದಿನಾಂಕದಂದು ಟೆಂಡರ್‌ನ್ನು ತೆರೆಯಲಾಗುವುದು. ಅಥವಾ ಟೆಂಡರ್ ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

1. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 06-01-2010 ಮಧ್ಯಾಹ್ನ 2.00ಗಂಟೆವರೆಗೆ.
2. ಖಾಲಿ ಟೆಂಡರ್ ಫಾರಂ ನೀಡಲು ಕೊನೆಯ ದಿನಾಂಕ: 06-01-2010.
3. ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸಲು ನೀಡಿರುವ ಕಾಲಾವಧಿ: 60ದಿನಗಳು

| ಕ್ರ. ಸಂ | ಕಾಮಗಾರಿಯ ಹೆಸರು | ಟೆಂಡರ್ ಗಿಟ್ಟ ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ (ರೂ.ಗಳಲ್ಲಿ) | ಟೆಂಡರ್ ಫಾರಂ ಬೆಲೆ (ರೂ.ಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| | **12ನೇ ಹಣಕಾಸು ಮುಕ್ತನಿಧಿ** | | | |
| 1 | ದೊಡ್ಡಬಳ್ಳಾಪುರ ನಗರದ ಭಗತ್‌ಸಿಂಗ್ ಸ್ಟೇಡಿಯಂ ಪಕ್ಕದಲ್ಲಿ ಚರಂಡಿ ನಿರ್ಮಿಸುವುದು ಹಾಗೂ ವಾರ್ಡ್ ನಂ.1ರ ಗಂಗಾಧರಪುರ ಅಡ್ಡರಸ್ತೆಗಳಲ್ಲಿ ಚರಂಡಿ ನಿರ್ಮಿಸುವ ಕೆಲಸ | 10.00 | 25000.00 | 1000.00+ತೆರಿಗೆ |
| | **12ನೇ ಹಣಕಾಸು ಸಾರ್ವಜನಿಕ ಕಟ್ಟಡ ನಿರ್ವಹಣೆ ನಿಧಿ** | | | |
| 2 | ನಗರಸಭಾ ಕಾರ್ಯಾಲಯದ ವಾರ್ಷಿಕ ನಿರ್ವಹಣೆ ಕಾಮಗಾರಿ. | 2.25 | 5625.00 | 500.00+ತೆರಿಗೆ |

**ಷರತ್ತುಗಳು:-**

1. ಖಾಲಿ ಟೆಂಡರ್ ಫಾರಂಗಾಗಿ ಮನವಿ ಸಲ್ಲಿಸುವಾಗ ಟೆಂಡರ್ ಫಾರಂ ಬೆಲೆ ಹಣವನ್ನು ಡಿ.ಡಿ ಮೂಲಕ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಅಥವಾ ಕಛೇರಿಯಲ್ಲಿ ನಗದುಪಾವತಿಸಿದ ರಸೀದಿ ಸಲ್ಲಿಸತಕ್ಕದ್ದು.
2. ಭರ್ತಿ ಮಾಡಿದ ಟೆಂಡರ್‌ಗಳ ಲಕೋಟೆಯಲ್ಲಿ ಇ.ಎಂ.ಡಿ ಹಣವನ್ನು ಡಿ.ಡಿ. ಮೂಲಕ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು.
3. ಕಾಮಗಾರಿಗಳ ಗುಣಮಟ್ಟ ಕಾಪಾಡುವ ಹಿತದೃಷ್ಟಿಯಿಂದ ಕಾಮಗಾರಿಯ ಅಂದಾಜು ಮೊತ್ತಕ್ಕಿಂತ ಕಡಿಮೆ ದರ ನಮೂದಿಸಿದಲ್ಲಿ ಅಂದಾಜಿನ ವ್ಯತ್ಯಾಸದ ಮೊತ್ತದ ಹಣವನ್ನು ಡಿ.ಡಿ. ರೂಪದಲ್ಲಿ ಟೆಂಡರ್ ಜೊತೆ ಲಗತ್ತಿಸಿ ಸಲ್ಲಿಸಬೇಕು, ತಪ್ಪಿದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.
4. ಕಾಮಗಾರಿಗಳು ಗುತ್ತಿಗೆದಾರರ ಟೆಂಡರ್ ದರಗಳು ಒಂದು ವರ್ಷ (ಟೆಂಡರ್ ಕರೆದ ದಿನಾಂಕದಿಂದ) ಅವಧಿಯ ಸಿಂಧುತ್ವ ಹೊಂದಿರುತ್ತದೆ.
5. ಕಾಮಗಾರಿಗಳು ಪೂರ್ಣಗೊಂಡ ನಂತರ 3ನೇ ಪಾರ್ಟಿಯಿಂದ ಕಾಮಗಾರಿ ಗುಣಮಟ್ಟದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸಿದ ನಂತರ ಅಂತಿಮ ಬಿಲ್ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.
6. ಎರಡು ವರ್ಷ ನಿರ್ವಹಣಾ ವೆಚ್ಚವನ್ನು ಗುತ್ತಿಗೆದಾರರೇ ಬರಿಸುವುದು.
7. ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಕಾಯ್ದಿರಿಸಿಕೊಂಡಿರುತ್ತದೆ.
8. ಟೆಂಡರ್ ನಿಬಂಧನೆಗಳು ಹಾಗೂ ಇತರೆ ಹೆಚ್ಚಿನ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಮತ್ತು www.doddaballapurcity.gov.in ನಲ್ಲಿ ಪಡೆದು ತಿಳಿದುಕೊಳ್ಳುವುದು.

ಸಹಿ/-
**(ಎಸ್.ಪ್ರಭುದೇವ್ ಕೆ.ಎಂ.ಎ.ಎಸ್.)**
ಪೌರಾಯುಕ್ತರು,
ನಗರಸಭೆ, ದೊಡ್ಡಬಳ್ಳಾಪುರ

**"ನಕಲು"**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ**